**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬದಾಮಿ, ಸಂಚಾರಿ ನ್ಯಾಯಾಲಯ ಕೆರೂರ ರವರ ನ್ಯಾಯಾಲಯದಲ್ಲಿ**

**ಸಿ.ಸಿ.ನಂ.1241/2022**

1. ಕರ್ನಾಟಕ ಸರ್ಕಾರದ ಪರವಾಗಿ ಬದಾಮಿ ಅಬಕಾರಿ ವಲಯ

.......ಫಿರ್ಯಾದಿದಾರರು

// ವಿರುದ್ಧ //

1. ಶ್ರೀ ಉಮೇಶ ಅಣ್ಣಪ್ಪ ರಾಠೋಡ

........ಆರೋಪಿತನು

ನಾನು ಶ್ರೀಮತಿ ಭವ್ಯ ಕೆ., ಬಿ.ಬಿ.ಎ., ಎಲ್.ಎಲ್.ಬಿ. ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬಾದಾಮಿ, ಸಂಚಾರಿ ನ್ಯಾಯಾಧೀಶರು, ಕೆರೂರ ಆದ ನಾನು ನಿಮ್ಮ ಮೇಲೆ ಅಂದರೆ,

1. ಶ್ರೀ ಉಮೇಶ ಅಣ್ಣಪ್ಪ ರಾಠೋಡ
   ವಯಸ್ಸು: 45 ವರ್ಷ
   ಸಾ: ಜಲಗೇರಿ ತಾಂಡಾ, ತಾ: ಬಾದಾವಿ, ಜಿ: ಬಾಗಲಕೋಟೆ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುವುದೇನೆಂದರೆ,

:: **ದೋಷಾರೋಪಣೆ** ::

ದಿನಾಂಕ: 28-06-2022 ರಂದು ಬೆಳಿಗ್ಗೆ 7-30 ಗಂಟೆಯ ಸುಮಾರಿಗೆ ಬಾದಾಮಿ ತಾಲೂಕಿನ ಕೆರೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಜಲಗೇರಿ ತಾಂಡಾದಿಂದ ನೀರಬೂದಿಹಾಳ ಗ್ರಾಮಕ್ಕೆ ಹೋಗುವ ಸರಕಾರಿ ರಸ್ತೆಯ ಜಲಗೇರಿ ತಾಂಡಾದಿಂದ 02 ಕಿ.ಮಿ. ಅಂತರದಲ್ಲಿನ ಎಡಬದಿ ಇರುವ ಕಚ್ಚಾ ರಸ್ತೆಯ ಮೇಲೆ ಆರೋಪಿತರಾದ ನೀವು ಅಕ್ರಮವಾಗಿ ಒಂದು ಬಿಳಿ ಬಣ್ಣದ ಗೊಬ್ಬರ ಚೀಲದಲ್ಲಿ 100 ಮಿ.ಲಿ. ಸಾಮರ್ಥ್ಯದ 35 ಕಳ್ಳಭಟ್ಟಿ ಸರಾಯಿ ತುಂಬಿದ ಪ್ಲಾಸ್ಟಿಕ್ ಪಾಕೇಟುಗಳನ್ನು ಕಚ್ಚಾ ರಸ್ತೆಯ ಮೇಲೆ ಎಸೆದು. ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ: 32(1)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲ್ಕಂಡ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಆರೋಪಿತರಾದ ನೀವು ಮೇಲೆ ಹೇಳಿದಷ್ಟು ಪ್ರಮಾಣದ ಕಳ್ಳಭಟ್ಟಿ ಸರಾಯಿಯನ್ನು ಯಾವುದೇ ಅನುಮತಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ತಾಬಾದಲ್ಲಿಟ್ಟುಕೊಂಡಿರುತ್ತೀರಿ. ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲ್ಕಂಡ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಆರೋಪಿತರಾದ ನೀವು ಮೇಲೆ ತಿಳಿಸಿದ ಮಾನವನ ಸೇವನೆಗೆ ಯೋಗ್ಯವಲ್ಲದ ಕಳ್ಳಭಟ್ಟಿ ಸರಾಯಿ ಪಾಕೇಕಟುಗಳನ್ನು ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ ಸಿಕ್ಕಿರುತ್ತೀರಿ. ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.273 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಪ್ರಶ್ನೆ: ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ?

ಉತ್ತರ: ತಿಳಿಯಿತು.

ಪ್ರಶ್ನೆ: ಈ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಉತ್ತರ: ವಿಚಾರಣೆಯಾಗಬೇಕು.

ಆರೋಪಿತನಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಇಂದು ನಮ್ಮ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಕೊಟ್ಟ ಉತ್ತರಗಳನ್ನು ನಮೂದಿಸಿಕೊಳ್ಳಲಾಗಿದೆ.

ಸ್ಥಳ: ಕೆರೂರ
ದಿನಾಂಕ: 4/10/24

(ಸಹಿ) 4/10
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ,
ಬದಾಮಿ, ಸಂಚಾರಿ ನ್ಯಾಯಾಲಯ ಕೆರೂರ

Scanned with OKEN Scanner